ಶ್ರೀ ಇಳ್ಳಲ್ ವಿಜಯಕುಮಾರ್:– ಮಾನ್ಯ ಅಧ್ಯಕ್ಷರೇ ಇದನ್ನು ಜಿಲ್ಲಾ ಪರಿಷತ್ತಿನವರೇ ಅಭಿವೃದ್ಧಿ ಮಾಡುವುದು. ಅದಕ್ಕೆ ನಾನು ಅವರಿಗೆ ಪ್ರಶ್ನೆ ಕೇಳಿದೆ.

ಅಧ್ಯಕ್ಷರು:– ನಾನು ತರಿಸಿ ನೋಡುತ್ತೇನೆ. ನನಗೆ ಉತ್ತರ ಕಳುಹಿಸಿಕೊಟ್ಟಿಲ್ಲ.

ಬೆಂಗಳೂರು ಡೈರಿಯಲ್ಲಿ ಸಾರ್ವಜನಿಕ ಕುಂದುಕೊರತೆ ವಿಭಾಗ

(1839): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರವು ಬೆಂಗಳೂರು ಡೇರಿಯಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಸೆಲ್ ಸೃಷ್ಟಿಸಿದೆಯೆ;

ಆ. ಹಾಗಾದರೆ, ಸಾರ್ವಜನಿಕರಿಗೆ ಇದನ್ನು ತಿಳಿಸಲಾಗಿದೆಯೇ;

ಇ. ಸಾರ್ವಜನಿಕರ ಕುಂದುಕೊರತೆ ಸೆಲ್ ಸೃಷ್ಟಿಸಿಲ್ಲವಾದರೆ ಸರ್ಕಾರವು ಸೆಲ್ ತೆರೆಯಲು ತುರ್ತು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ. ಹೌದು

ಆ. ಹೌದು

ಇ. ಉದ್ಭವಿಸುವುದಿಲ್ಲ.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ, ಉತ್ತರ ಕೊಟ್ಟಿದೆ. ನಾನು ಪ್ರಶ್ನೆ ಕೇಳಿದ್ದುದು ಬೆಂಗಳೂರು ಡೈರಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳ ವಿಭಾಗವನ್ನು ಸರ್ಕಾರ ಸ್ಥಾಪಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಇದು ಯಾವಾಗ ಜಾರಿಗೆ ಬಂತು ? ಇದನ್ನು ಹೊಸದಾಗಿ ಮಾಡಿದ್ದೀರಾ ? ಇದು ಹಿಂದಿನ ಮಂತ್ರಿಗಳ ಕಾಲದಲ್ಲಿ ಆಗಿತ್ತೋ ಅಥವಾ ತಾವು ಬಂದ ಮೇಲೆ ಮಾಡಿದ್ದೋ ಎಂದು ನಾನು ಕೇಳುತ್ತೇನೆ. ಮತ್ತೆ ನನ್ನ ಎರಡನೇ ಪ್ರಶ್ನೆ ಅದರ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರ ಸ್ಟೇಟ್‌ಮೆಂಟ್ ನಾವು ಪತ್ರಿಕೆಗಳಲ್ಲಿ ಓದಿಲ್ಲ. ಮತ್ತು ಇದರ ಬಗ್ಗೆ ಏನಾದರೂ ಎಂ.ಎಲ್.ಎ.ಗಳನ್ನು ಕರೆಯಿಸಿ ಪೂರ್ಣವಾಗಿ ಚರ್ಚೆ ಮಾಡಿ ಏನು ಭ್ರಷ್ಟಾಚಾರ ಡೈರಿಯಲ್ಲಿ ನಡೆಯುತ್ತಿದೆ ಅದನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೇ, ಬೆಂಗಳೂರು ಡೈರಿಯಲ್ಲಿ ಈ ಸಾರ್ವಜನಿಕರ ಕುಂದುಕೊರತೆಗಳ ವಿಭಾಗ ದಿನಾಂಕ 3–2–93ರಲ್ಲಿ ಬಂತು. ದಿನಾಂಕ 3–2–93ರಲ್ಲಿ ಬರೀ ಬೆಂಗಳೂರು ಡೈರಿ ಅಲ್ಲದೆ ರಾಜ್ಯದಲ್ಲಿರತಕ್ಕಂಥಾ ಎಲ್ಲಾ ಡೈರಿಗಳಲ್ಲಿ ಕುಂದುಕೊರತೆಗಳ ವಿಭಾಗ ನಾವು ಪ್ರಾರಂಭ ಮಾಡಿದ್ದೇವೆ. ಎರಡನೆಯದಾಗಿ ಪತ್ರಿಕೆಗಳಲ್ಲಿ ಬಂದಿದೆಯೇ ಎಂದು ಕೇಳಿದರು. ದಿನಾಂಕ 6–2–93 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ, ದಿನಾಂಕ 5–2–93ರಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮತ್ತು ದಿನಾಂಕ 7–2–93ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಬಂದಿದೆ. ಮತ್ತು ಕಳೆದ ತಿಂಗಳಲ್ಲಿ ಶಾಸಕರನ್ನು ಮತ್ತು ಬೆಂಗಳೂರು ಡೈರಿಯಲ್ಲಿರತಕ್ಕಂಥ ಮತ್ತು ಇತರೆ ಕಡೆಗಳಲ್ಲಿ ಇರತಕ್ಕಂಥ ಕುಂದುಕೊರತೆಗಳ ಅಧಿಕಾರಿಗಳನ್ನು ಕರೆದು ವಿಧಾನ ಸೌಧದಲ್ಲಿ ಸಭೆಯನ್ನು ಮಾಡಲಾಗಿದೆ. ಮತ್ತೊಂದು ಪ್ರಶ್ನೆಗೆ ಅವರು ಭ್ರಷ್ಟಾಚಾರದ ಬಗ್ಗೆ ಶಾಸಕರನ್ನು ಕರೆದು ಮಾತನಾಡಿ

ಬಗ್ಗೆ ಹಾಗೂ ಹೆಚ್ಚು ಧಾರಣೆ ಬಗ್ಗೆ, ಟೈಮ್ ಬಗ್ಗೆ ಸರಿಯಾಗಿ ಸಪ್ಲೈ ಮಾಡದೆ ಇರುವ ಬಗ್ಗೆ, ಕಲಬೆರಕೆ ಯಾರು ಮಾಡುತ್ತಾರೊ ಅದರ ಬಗ್ಗೆ ಕೂಡಬಹುದು. ಇನ್ನು ಡೈರಿ ಅವ್ಯವಹಾರಗಳ ಬಗ್ಗೆ ಶಾಸಕರನ್ನು ಕರೆಯಬೇಕೆಂದು ಹೇಳಿದ್ದಾರೆ. ನಾನು ಖಂಡಿತವಾಗಿ ಒಂದು ಸಭೆ ಕರೆದು ಅವ್ಯವಹಾರಗಳನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ದಯಾನಂದರಾವ್:– ಕೆ.ಎಂ.ಎಫ್.ನಿಂದ ಬರುವಂತಹ ಹಾಲಿಗೆ ನೀರು ಬೆರೆಸುವುದು ವಾಡಿಕೆ ಆಗಿದೆ. ಇದು ಆಕಸ್ಮಾತ್ ಆಗಿ ಡೈರಿಯಲ್ಲಿ ನೀರು ಬೆರೆಸುತ್ತಾರೋ ಅಥವಾ ಕೆ.ಎಂ.ಎಫ್. ಬೂತ್‌ಗಳಲ್ಲಿ ನೀರು ಬೆರೆಸುತ್ತಾರೋ ಗೊತ್ತಿಲ್ಲ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಇವೆ. ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

10.40 ಎ.ಎಂ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಸಭಾಧ್ಯಕ್ಷರೇ, ಎಲ್ಲೆಲ್ಲಿ ಮಿಲ್ಕ್ ವೆಂಡಿಂಗ್ ಬೂತ್‌ಗಳಿವೆಯೋ ಅದರಲ್ಲಿಯೂ ಮದರ್ ಡೈರಿ ಬಗ್ಗೆ ಹೇಳಿದ್ದಾರೆ ಅಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಂಥ ದೂರುಗಳು ಇದ್ದರೆ, ಅವುಗಳನ್ನು ಕುಂದುಕೊರತೆ ಸಮಿತಿಗೆ ಸಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು

(1712): ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಇರುವ ಒಟ್ಟು ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ಎಷ್ಟು;

ಆ. ಸದರೀ ಸಂಘ ಹಾಗೂ ಬ್ಯಾಂಕುಗಳಿಂದ ಸಾರ್ವಜನಿಕರಿಗೆ ಆಗುವ ಉಪಯೋಗಗಳಾವುವು ? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ರಾಜ್ಯದಲ್ಲಿ 31-03-1992ರ ಅಂತ್ಯಕ್ಕೆ 25,249 ಸಹಕಾರ ಸಂಘಗಳು ಮತ್ತು 424 ಬ್ಯಾಂಕುಗಳು ಇರುತ್ತವೆ.

ಆ. ರೈತರ ಹಾಗೂ ಸಾರ್ವಜನಿಕರ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳು ಮಹತ್ವದ ಪಾತ್ರ ವಹಿಸುತ್ತಿವೆ. ಆಯಾ ಸಂಘಗಳು ಉಪ ನಿಯಮಗಳಲ್ಲಿ ನಮೂದಿಸಿರುವ ಉದ್ದೇಶಗಳನುಸಾರ ವಿವಿಧ ಧ್ಯೇಯಗಳನ್ನು ಸದಸ್ಯರ ಉಪಯೋಗಕ್ಕಾಗಿ ನಿರ್ವಹಿಸುತ್ತಿವೆ. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ: [illegible]